## ನಿಮ್ಮೊಡನೆ

# ಹಿಂದಿ ಹೇರಿಕೆ ಭಾಷಾ ಬಹುತ್ವಕ್ಕೆ ಧಕ್ಕೆ

ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಭಾಷೆ, ಪ್ರಾಂತ್ಯದ ಆಧಾರದಲ್ಲಿ ರಾಜ್ಯಗಳನ್ನು ವಿಂಗಡಿಸಲಾಗಿದೆ. ಆಯಾ ರಾಜ್ಯಗಳ ಸ್ಥಳೀಯ ಭಾಷೆಯನ್ನೇ ಆಡಳಿತ ಭಾಷೆಯನ್ನಾಗಿ ಮಾಡಲಾಗಿದ್ದು, ಹಿಂದಿ ಹೇರಿಕೆ ಸಂವಿಧಾನ ವಿರೋಧಿ ಎಂಬ ಕೂಗು ಈಗ ಜೋರಾಗೇ ಕೇಳಿ ಬರುತ್ತಿದೆ.

ಕೇಂದ್ರ ಸರ್ಕಾರದ ಹಿಂದಿ ಭಾಷಾ ಹೇರಿಕೆಯ ಧೋರಣೆ ಕರ್ನಾಟಕದಂತಹ ಹಿಂದಿಯೇತರ ರಾಜ್ಯದ ಬಹುತೇಕ ಕ್ಷೇತ್ರಗಳಲ್ಲಿ ವ್ಯಕ್ತವಾಗುತ್ತಿರುವುದು ನಮ್ಮ ಸಾಂಸ್ಕೃತಿಕ ಬಹುತ್ವಕ್ಕೆ ಆತಂಕ ಹುಟ್ಟಿಸುವಂತಹದ್ದು; ಕನ್ನಡ ಭಾಷೆಗೆ ಧಕ್ಕೆ ತರುವಂತಹದ್ದು. ಕಳೆದ ತಿಂಗಳಷ್ಟೇ ರಾಜಧಾನಿ ಬೆಂಗಳೂರಿನ 'ನಮ್ಮ ಮೆಟ್ರೊ' ರೈಲು ನಿಲ್ದಾಣಗಳಲ್ಲಿ ಅನವಶ್ಯಕವಾಗಿ ಹಿಂದಿ ನಾಮಫಲಕಗಳು ಕಾಣಿಸಿಕೊಂಡಿದ್ದವು. ಕನ್ನಡಿಗರ ಮೇಲೆ ಹಿಂದಿ ಹೇರಲು ಅಥವಾ ವಲಸಿಗರನ್ನು ತೃಪ್ತಿಪಡಿಸಲು ಬಿಎಂಆರ್‌ಸಿಎಲ್ ಇದಕ್ಕೆ ಕೈ ಹಾಕಿತ್ತೇ? ಈ ಧೋರಣೆ ವಿರುದ್ಧ ಪ್ರತಿಭಟನೆಯ ನಂತರ ಅವುಗಳ ತೆರವು ಕಾರ್ಯ ನಡೆಯುತ್ತಿರುವುದು ಸದ್ಯಕ್ಕೆ ಕೊಂಚ ಸಮಾಧಾನದ ಸಂಗತಿಯಾದರೂ ರಾಜ್ಯದಲ್ಲಿರುವ ಕೇಂದ್ರೀಯ ವಿದ್ಯಾಲಯ ಹಾಗೂ ಸಿಬಿಎಸ್‌ಇ ಪಠ್ಯವಿರುವ ಶಾಲೆಗಳಲ್ಲಿ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಹಿಂದಿ ಭಾಷಾ ಕಲಿಕೆಯನ್ನು ಕಡ್ಡಾಯ ಮಾಡುವ ಶಿಫಾರಸ್ಸಿಗೆ ಮಾನ್ಯತೆ ಮಾಡಿರುವುದು, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಚಲನ್‌ಗಳು, ಠೇವಣಿ, ಸಾಲದ ಅರ್ಜಿಗಳು ಸೇರಿದಂತೆ ಇನ್ನಿತರ ಸೇವೆಗಳು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರವಿದ್ದು, ಕನ್ನಡಕ್ಕೆ ಕೊಕ್ ನೀಡಿರುವುದು ಕನ್ನಡ ಭಾಷೆಯ ಜೀವಂತಿಕೆಗೆ ಅಪಾಯ ಒಡ್ಡಿದೆ.

ಬ್ಯಾಂಕ್ ಸೇವೆಯನ್ನೇ ತೆಗೆದುಕೊಂಡರೆ, ಕರ್ನಾಟಕದಲ್ಲೇ ಸ್ಥಾಪನೆಯಾಗಿರುವ ಬ್ಯಾಂಕುಗಳು ಕೂಡ ಕನ್ನಡವನ್ನು ಕೈಬಿಟ್ಟಿದ್ದರಿಂದ ಇಂಗ್ಲಿಷ್ ಮತ್ತು ಹಿಂದಿ ಗೊತ್ತಿಲ್ಲದ ಕನ್ನಡಿಗರು ವ್ಯವಹಾರ ನಡೆಸುವುದಾದರೂ ಹೇಗೆ ಎಂಬ ಪ್ರಶ್ನೆ ಎದುರಾಗಿದೆ. ಬ್ಯಾಂಕುಗಳಲ್ಲಿರುವ ಅಧಿಕಾರಿಗಳು, ಇತರ ಸಿಬ್ಬಂದಿ ಅನ್ಯಭಾಷಿಕರಾಗಿದ್ದರಂತೂ ಕನ್ನಡ ಮಾತ್ರ ಬಲ್ಲ ಗ್ರಾಹಕ ಪರದಾಡುವಂತಹ ಪರಿಸ್ಥಿತಿ ಇದೆ. ಜೊತೆಗೆ ಬೆಂಗಳೂರು ಬಿಟ್ಟರೆ ಇತರ ನಗರಗಳು, ಸಣ್ಣ ಪಟ್ಟಣಗಳಲ್ಲಿ ಹಿಂದಿ ಮಾತ್ರ ಗೊತ್ತಿರುವಂತಹ ಉ.ಪ್ರದೇಶ ಅಥವಾ ದೆಹಲಿಯ ವಲಸಿಗರ ಸಂಖ್ಯೆ ತೀರಾ ಕಡಿಮೆ. ಕನ್ನಡ ಕೈಬಿಟ್ಟಿರುವುದು ಅಲ್ಲಿರುವ ಬಹುಸಂಖ್ಯಾತ ಕನ್ನಡಿಗರಿಗೆ ಅನ್ಯಾಯ ಮಾಡಿದಂತಾಗಲಿಲ್ಲವೇ? ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ನಾಗರಿಕ ಸೇವೆಗಳಾದ ಬ್ಯಾಂಕ್, ಅಂಚೆ, ವಿಮೆ, ತೆರಿಗೆ, ವಿಮಾನ, ರೈಲು, ಹೆದ್ದಾರಿ ಸೇವೆ ಮೊದಲಾದವುಗಳನ್ನು ನೀಡುವ ಹೊಣೆ ಕೇಂದ್ರ ಸರ್ಕಾರದ್ದು. ಈ ಸೇವೆಗಳನ್ನು ಆಯಾ ರಾಜ್ಯದ ಭಾಷೆಯಲ್ಲೇ ನೀಡುವುದು ಅದರ ಕರ್ತವ್ಯ ಕೂಡಾ. ಆದರೆ ಹಿಂದಿಯಲ್ಲೇ ಈ ಎಲ್ಲಾ ನಾಗರಿಕ ಸೇವೆ ಎಂಬ ಧೋರಣೆ ಸರಿಯಲ್ಲ.

ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿರುವ ಮೈಲುಗಲ್ಲುಗಳೂ ಹಿಂದಿಮಯವಾಗುತ್ತಿದ್ದು ಚಾಲಕರನ್ನು ಗೊಂದಲಕ್ಕೀಡು ಮಾಡುತ್ತಿವೆ. ಶಿಕ್ಷಣದಲ್ಲೂ ಹಿಂದಿ ಹೇರುವುದನ್ನು ಬಿಟ್ಟು ಮಾತೃಭಾಷೆಯಲ್ಲೇ ಆಮೂಲಾಗ್ರ ಶಿಕ್ಷಣ ನೀಡಿದರೆ ಸ್ಥಳೀಯ ಭಾಷೆ ಶ್ರೀಮಂತವಾಗುವುದರಲ್ಲಿ ಸಂಶಯವಿಲ್ಲ. ಸದ್ಯಕ್ಕೆ ಕೇಂದ್ರೀಯ ವಿದ್ಯಾಲಯದಲ್ಲಿ ಕನ್ನಡ ಕಡ್ಡಾಯಗೊಳಿಸುವ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿರುವುದು ಸ್ತುತ್ಯರ್ಹ.

ಕೇಂದ್ರ ಸರ್ಕಾರದ ಉದ್ಯೋಗ ನೇಮಕಾತಿಯಲ್ಲೂ ಕೂಡಾ ಹಿಂದಿ, ಇಂಗ್ಲಿಷ್‌ಗೆ ಮಣೆ ಹಾಕಲಾಗಿದ್ದು, ಹಿಂದಿ ಭಾಷಿಕರೇ ಪಾರಮ್ಯ ಮೆರೆಯುತ್ತಿದ್ದಾರೆ ಎಂಬ ಅಸಮಾಧಾನವೂ ಕನ್ನಡಿಗರಲ್ಲಿದೆ.

ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಭಾಷೆ, ಪ್ರಾಂತ್ಯದ ಆಧಾರದಲ್ಲಿ ರಾಜ್ಯಗಳನ್ನು ವಿಂಗಡಿಸಲಾಗಿದೆ. ಆಯಾ ರಾಜ್ಯಗಳ ಸ್ಥಳೀಯ ಭಾಷೆಯನ್ನೇ ಆಡಳಿತ ಭಾಷೆಯನ್ನಾಗಿ ಮಾಡಲಾಗಿದ್ದು, ಈ ಹಿಂದಿ ಹೇರಿಕೆ ಸಂವಿಧಾನ ವಿರೋಧಿ ಎಂಬ ಕೂಗು ಈಗ ಜೋರಾಗೇ ಕೇಳಿ ಬರುತ್ತಿದೆ. ಅದರಲ್ಲೂ ದಕ್ಷಿಣ ಭಾರತದಲ್ಲಿ ಹಿಂದಿಯಲ್ಲಿ ಮಾತನಾಡುವವರ ಸಂಖ್ಯೆ ಶೇ 5–10ರಷ್ಟಿರಬಹುದು. ಸ್ಥಳೀಯ ಭಾಷೆಯಲ್ಲಿ ವ್ಯವಹರಿಸುವಂತಹ ಉಳಿದ ಶೇ.90ರಷ್ಟು ಜನರ ಮೇಲೆ ಈ ಹೇರಿಕೆಯ ಮನೋಭಾವ ಎಷ್ಟು ಸರಿ?

ಬಹು ಭಾಷೆ, ಬಹು ಜನಾಂಗ, ಬಹು ಸಂಸ್ಕೃತಿ ಭಾರತದ ಹೆಗ್ಗುರುತು. ಈ ಬಹುತ್ವದಲ್ಲೂ ಏಕತೆಯಿದೆ. ಕನ್ನಡ, ಹಿಂದಿ ಸೇರಿ 22 ಭಾಷೆಗಳಿಗೆ ಸಂವಿಧಾನದಲ್ಲಿ ಮಾನ್ಯತೆ ನೀಡಿದ್ದರೂ ಯಾವುದೇ ಭಾಷೆಯನ್ನೂ ರಾಷ್ಟ್ರೀಯ ಭಾಷೆ ಎಂದು ಗುರುತಿಸಿಲ್ಲ. ವ್ಯವಹಾರಕ್ಕೆ, ಸಂವಹನಕ್ಕೆ ತ್ರಿಭಾಷಾ ಸೂತ್ರವಿದ್ದು, ಜಾಗತಿಕ, ರಾಷ್ಟ್ರ ಹಾಗೂ ಸ್ಥಳೀಯ ಎಂದು ವಿಂಗಡಣೆ ಮಾಡಿ ಇಂಗ್ಲಿಷ್, ಹಿಂದಿ ಮತ್ತು ಸ್ಥಳೀಯ ಭಾಷೆಗೆ ಆದ್ಯತೆ ನೀಡಲಾಗಿದೆ. ಕೇವಲ 4–5 ರಾಜ್ಯಗಳಲ್ಲಿ ಹಿಂದಿ ಬಿಟ್ಟರೆ ಉಳಿದ ರಾಜ್ಯಗಳಲ್ಲಿ ಸ್ಥಳೀಯ ಭಾಷೆಯಿದೆ. ನಮ್ಮ ಸಾಂಸ್ಕೃತಿಕ ನೆಲೆಗಟ್ಟು ನಿಂತಿರುವುದು ಸ್ಥಳೀಯ ಭಾಷೆಯಲ್ಲಿ. ಸರ್ಕಾರಿ ಸೇವಾ ಕ್ಷೇತ್ರಗಳಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ, ಉದ್ಯೋಗ ನೇಮಕಾತಿಯಲ್ಲಿ ಹಿಂದಿ ಹೇರಿದರೆ ಬಹುತ್ವ ಸಂಸ್ಕೃತಿಗೆ ಧಕ್ಕೆಯಾಗಬಹುದು. ವಲಸಿಗರನ್ನು ಓಲೈಸುವ ಉದ್ದೇಶವಿದ್ದರೆ ಸಮಸ್ಯೆ ಸೃಷ್ಟಿಯಾಗಬಹುದು. ಅನ್ಯ ಭಾಷೆಗಿಂತ ನಮ್ಮ ಭಾಷೆ ಶ್ರೇಷ್ಠ, ನಮ್ಮನ್ನು ನಿರ್ಲಕ್ಷಿಸುವುದೇಕೆ ಎಂಬಂತಹ ವಿಷಯಗಳು ಉದ್ಭವಿಸಿ ಸಂಘರ್ಷಕ್ಕೆ ಕಾರಣವಾಗಬಹುದು. ಹಿಂದೆ ಇದೇ ರೀತಿ ಹಿಂದಿ ಹೇರಲು ಹೋಗಿ, ತಮಿಳುನಾಡಿನಿಂದ ತೀವ್ರ ಪ್ರತಿರೋಧ ವ್ಯಕ್ತವಾಗಿದ್ದನ್ನು ಇಲ್ಲಿ ನೆನಪಿಸಬಹುದು.

ಈ ಹೇರಿಕೆಯ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲೂ ಕೂಗೆದ್ದಿದ್ದು, ಜಾಗೃತಿ ಮೂಡಿಸುವ ಕೆಲಸದಲ್ಲಿ ಕನ್ನಡ ಸಂಘಟನೆಗಳ ಜೊತೆ ಕೈಜೋಡಿಸಿರುವುದು ಪ್ರಶಂಸಾರ್ಹ. ರಾಜ್ಯದಲ್ಲಿರುವ ಅನ್ಯ ಭಾಷಿಕರು ಕನ್ನಡವನ್ನು ಕಲಿತುಕೊಳ್ಳಲಿ. ಬಹುತ್ವದ ಸಾಂಸ್ಕೃತಿಕ ನೆಲೆಗಟ್ಟು ಉಳಿಸಲು, ಭಾಷಾ ಸಮಗ್ರತೆ, ಸಮೃದ್ಧಿ ಹೆಚ್ಚಿಸಲು, ಭಾಷಾ ನೀತಿ ಪೂರಕವಾಗಿರಲಿ.

■ **ಸುಧಾ ಹೆಗಡೆ**

